ಯಾರಾದರೂ ಬಂದು ಇದು ನಿಮ್ಮ ಪರಿಧಿಗೆ ಬರುವುದಿಲ್ಲ, ಇದರಲ್ಲಿ ನಿಮ್ಮ terms of refernce ಇದೆ, ಇಲ್ಲದೇ ಇರತಕ್ಕಂಥ ಪ್ರಶ್ನೆ ನೀವು ಏಕೆ ಕೇಳುತ್ತೀರಿ? ಅಥವಾ ಇಲ್ಲದೇ ಇರತಕ್ಕಂಥ ಪ್ರಶ್ನೆಗಳಿಗೆ ನಾವು ಉತ್ತರ ಕೊಡುವುದಿಲ್ಲ ಅನ್ನತಕ್ಕಂಥ ಪ್ರಶ್ನೆಗಳು ಉದ್ಭವಿಸುತ್ತವೆ. ಅದಕ್ಕೆ ಸ್ಪಷ್ಟವಾದಂಥ ಕೆಲವು terms of reference ಅನ್ನು ತಾವು ಕೊಟ್ಟರೆ, ಏತಕ್ಕೋಸ್ಕರ ಲಂಚವನ್ನು ಪಡೆದರು? ಯಾವ ಕಾರಣಕ್ಕಾಗಿ ಪೊಲೀಸ್‌ನವರು arrest ಮಾಡಿದರು? ತನ್ನ ಪ್ರಭಾವವನ್ನು ಬೀರಿ ನಾನು ಕೆಲಸವನ್ನು ಮಾಡಿಸಿಕೊಡುತ್ತೇನೆ ಎನ್ನುವುದು ಅಥವಾ ಸರ್ಕಾರದ ಒಂದು ಪ್ರಭಾವ ಬೀರಿ ಕೇಸನ್ನು withdraw ಮಾಡಿಸುತ್ತೇನೆ ಎಂದು ಹೇಳುವುದು. ಇಂತಹವುಗಳಿಗೆ ಕೆಲವೊಂದು terms of referenceಗೆ ಹಾಕಿದರೆ ಅದಕ್ಕೆ ಉತ್ತರ ಸಿಗುತ್ತದೆ, ಇಲ್ಲದಿದ್ದರೆ ಉತ್ತರವೇ ಸಿಗುವುದಿಲ್ಲ, general report ಕೊಡುತ್ತಾರೆ. ಅದು ಅಲ್ಲಿಗೆ close ಆಗಿ ಹೋಗುತ್ತದೆ. ದಯವಿಟ್ಟು ಅದರ ಬಗ್ಗೆ ತಾವು ಹೇಳಬೇಕು.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಏನು ಕೆಲವೊಂದು ಪ್ರಶ್ನೆಗಳನ್ನು raise ಮಾಡಿದರು, ಅದು ಸರಿಯಿದೆ. ಈ ಹಿಂದೆ ಬೇರೆ ಬೇರೆ ಸದನ ಸಮಿತಿಗಳು ಇಲ್ಲಿ ರಚನೆಯಾದಂಥ ಸಂದರ್ಭದಲ್ಲಿ, ಜಂಟಿ ಸದನ ಸಮಿತಿ ರಚನೆಯಾದಂಥ ಸಂದರ್ಭದಲ್ಲಿ, ಈಗ ನಾನು ಇದಕ್ಕೆ ನನ್ನ ruling ಕೊಟ್ಟಿದ್ದೇನೆ. ಈಗ ತಾವು ಏನು ಸಲಹೆ ಕೊಟ್ಟಿದ್ದೀರಲ್ಲಾ, ಏನು specific ಆದಂಥ terms of reference ಇದೆಯಲ್ಲಾ, ಈ ನಿರ್ಣಯವನ್ನು ಕಮಿಟಿ constitute ಆಗುವಾಗ ಏನು bulletin ಹೊರಡಿಸುತ್ತೇನೆ, ಆಗ ಅದರ ಜೊತೆಗೆ terms of reference ಅನ್ನು ಸಹ ನಾನು ಕಳುಹಿಸಿಕೊಟ್ಟು, ಯಾವ ಒಂದು ವ್ಯಾಪ್ತಿಯಲ್ಲಿ ಇದರ ಬಗ್ಗೆ ನಿರ್ಣಯ ಕೊಡಬೇಕು ಎಂಬುದನ್ನು specific ಆಗಿ, ಈ ಚರ್ಚೆಯ ಹಿನ್ನೆಲೆಯಲ್ಲಿ, terms of reference ಅನ್ನು ಕೊಟ್ಟೇ ನಾನು ಕಳುಹಿಸುತ್ತೇನೆ. ಮುಂದೆ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಮೊದಲನೇ ಪ್ರಶ್ನೆ ಮಾನ್ಯ ಸಿ.ಟಿ.ರವಿಯವರದು. ಇದಕ್ಕೆ ಮಾನ್ಯ ಕೃಷಿ ಸಚಿವರು ಉತ್ತರ ಕೊಡುತ್ತಾರೆ.

6. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ರೈತರ ಸಬ್ಸಿಡಿ ಕೃಷಿ ಪರಿಕರಗಳ ಬೆಲೆ ಮಾರುಕಟ್ಟೆ ದರ ಹೆಚ್ಚಾಗಿರುವ ಬಗ್ಗೆ.

57(348) ಶ್ರೀ.ಸಿ.ಟಿ.ರವಿ (ಚಿಕ್ಕ ಮಗಳೂರು)

ಶ್ರೀ.ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ಕೃಷಿ ಇಲಾಖಾವತಿಯಿಂದ ರೈತರಿಗೆ ನೀಡುವ ಸಬ್ಸಿಡಿ ಆಧಾರದ ಮೇಲೆ ನೀಡುತ್ತಿರುವ ಕೃಷಿ ಪರಿಕರಗಳ ಬೆಲೆಯು ಮುಕ್ತ ಮಾರುಕಟ್ಟೆ ದರಕ್ಕಿಂತ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ

ಆ) ಹಾಗಿದ್ದಲ್ಲಿ, ಇದರ ಪರಿಹಾರಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಅನ್ವಯಿಸುವುದಿಲ್ಲ.

ಇ) ಈ ಸೌಲಭ್ಯದ ಫಲಾನುಭವಿಗಳ ಆಯ್ಕೆಗೆ ಸರ್ಕಾರ ರೂಪಿಸಿರುವ ನಿರ್ದಿಷ್ಟ ಮಾನದಂಡವೇನು;

ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸೌಲಭ್ಯ ನೀಡಲಾಗುತ್ತಿದೆ. ಕೆಲವು ಯೋಜನೆಗಳಲ್ಲಿ ಇತರೇ ರೈತರಿಗೂ ಸೌಲಭ್ಯ ನೀಡಲಾಗುತ್ತಿದೆ. ಹನಿ ಮತ್ತು ಸೂಕ್ಷ್ಮ ನೀರಾವರಿ ಯೋಜನೆಯಡಿಯಲ್ಲಿ ಹಾಗೂ ಸಸ್ಯ ಸಂರಕ್ಷಣಾ ಹಾಗೂ ಉಪಕರಣ ಸೌಲಭ್ಯ ಎಲ್ಲಾ ರೈತರಿಗೂ ನೀಡಲಾಗುತ್ತಿದೆ.

ಈ) ಸರ್ಕಾರ ಕೃಷಿ ಪರಿಕರಗಳ ಪೂರೈಕೆಗೆ ಏಜೆನ್ಸಿ ನಿಗಧಿಪಡಿಸುವಾಗ ಅಳವಡಿಸಿರುವ ಮಾನದಂಡಗಳೇನು (ವಿವರ ನೀಡುವುದೆ)?

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದ ಪ್ರಕಾರ ಟೆಂಡರ್ ಕರೆದು ತಾಂತ್ರಿಕವಾಗಿ ವಿಶಿಷ್ಟತೆಗಳ ಪ್ರಕಾರ ಇರುವ ಅತಿ ಕಡಿಮೆ ದರದಲ್ಲಿ ಒಪ್ಪಿರುವ ಏಜೆನ್ಸಿಗಳನ್ನು ಆಯ್ಕೆ ಮಾಡಲಾಗುವುದು.

ಜೈವಿಕ ಕೀಟ ನಾಶಕ, ಸಸ್ಯ ಸಂರಕ್ಷಣಾ ಔಷಧಿ ಮತ್ತು ಉಪಕರಣಗಳಿಗೆ ಕೋಟೇಶನ್ ಕರೆಯಲಾಗುವ ಮುಖಾಂತರ ಏಜೆನ್ಸಿಗಳಿಗೆ ಎಂಪ್ಯಾನೆಲ್‌ಮೆಂಟ್ ಮಾಡುವ ಮೂಲಕ ಪರಿಕರಗಳ ಪೂರೈಕೆ ಸಂಸ್ಥೆಗಳನ್ನು ನಿಗಧಿಪಡಿಸಲಾಗಿರುತ್ತದೆ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು) : ನಾನು ಕೇಳಿದ ಪ್ರಶ್ನೆ, ರಾಜ್ಯದಲ್ಲಿ ಕೃಷಿ ಇಲಾಖಾವತಿಯಿಂದ ರೈತರಿಗೆ ನೀಡುವ ಸಬ್ಸಿಡಿ ಆಧಾರದ ಮೇಲೆ ನೀಡುತ್ತಿರುವ ಕೃಷಿ ಪರಿಕರಗಳ ಬೆಲೆಯು ಮುಕ್ತ ಮಾರುಕಟ್ಟೆ ದರಕ್ಕಿಂತ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು. ಅದಕ್ಕೆ "ಇಲ್ಲ" ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ನನ್ನ ಮಾಹಿತಿಗೆ ಬಂದಂತೆ, ಈ ಹಿಂದೆ ಕೃಷಿ ಪರಿಕರಗಳನ್ನು ಏಜೆನ್ಸಿ ಮಾಡಿ, ಇಂತಹ ಏಜೆನ್ಸಿಯಲ್ಲೇ ತೆಗೆದುಕೊಳ್ಳಬೇಕೆಂದು ನಿಗಧಿ ಪಡಿಸಿದ್ದರು. ಅಲ್ಲಿ ಕೃಷಿ ಪರಿಕರಗಳ ಬೆಲೆ ಮಾರುಕಟ್ಟೆ ದರಕ್ಕಿಂತ ಹೆಚ್ಚಾಗಿದೆ ಎಂದು ರೈತರು ನನಗೆ ದೂರು ಸಲ್ಲಿಸಿದ ಆಧಾರದ ಮೇಲೆ ಈ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಇಲ್ಲವೆಂದು ಎರಡೇ ಶಬ್ದಗಳಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡಿದ್ದಾರೆಯೇ? ಎಷ್ಟು ಕಡೆ ಪರಿಶೀಲನೆ ಮಾಡಿದ್ದಾರೆ? ದೂರುಗಳೇನಾದರೂ

ಬಂದಿವೆಯೇ ಎನ್ನುವ ಮಾಹಿತಿಯನ್ನು ಕೊಡಬೇಕೆಂದು ಉಪಪ್ರಶ್ನೆಯನ್ನು ಕೇಳಲು ಬುಸುತ್ತೇನೆ. ಇನ್ನೊಂದು ಪ್ರಶ್ನೆ ಕೇಳಿದ್ದು, ಹಾಗಿದ್ದಲ್ಲಿ, ಇದರ ಪರಿಹಾರಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಎಂದರೆ, ಇದಕ್ಕೆ "ಅನ್ವಯಿಸುವುದಿಲ್ಲ" ಎಂದು ಹೇಳಿದ್ದಾರೆ. ಮೂರನೆಯದು, ಈ ಸೌಲಭ್ಯದ ಫಲಾನುಭವಿಗಳ ಆಯ್ಕೆಗೆ ಸರ್ಕಾರ ರೂಪಿಸಿರುವ ನಿರ್ದಿಷ್ಟ ಮಾನದಂಡವೇನು? ಎಂಬ ಪ್ರಶ್ನೆಗೆ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮಾತ್ರ ಈ ಸೌಲಭ್ಯ ನೀಡುತ್ತೇವೆ. ಹನಿ ಮತ್ತು ಸೂಕ್ಷ್ಮ ನೀರಾವರಿ ಯೋಜನೆಯಡಿಯಲ್ಲಿ ಹಾಗೂ ಸಸ್ಯ ಸಂರಕ್ಷಣಾ ಹಾಗೂ ಉಪಕರಣ ಸೌಲಭ್ಯ ಎಲ್ಲಾ ರೈತರಿಗೂ ನೀಡುತ್ತೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಯಾವ್ಯಾವ ಕೃಷಿ ಪರಿಕರಗಳಿಗೆ ಸಬ್ಸಿಡಿ ಇದೆ? (ಎಷ್ಟು ಸಬ್ಸಿಡಿ ಇದೆ? 2007–08ನೇ ಸಾಲಿಗಿಂತ ಮುಂಚೆ,) ಎಷ್ಟು ಸಬ್ಸಿಡಿ ಹಣವನ್ನು ನೀಡುತ್ತಿದ್ದೀರಿ? ಈ ಎಷ್ಟು ಸಬ್ಸಿಡಿ ಹಣವನ್ನು ನೀಡುತ್ತಿದ್ದೀರಿ? ಅರ್ಜಿ ಹಾಕಿದ ಎಷ್ಟು ದಿನಗಳಲ್ಲಿ ಸಬ್ಸಿಡಿ ಹಣವನ್ನು ನೀಡುತ್ತೀರಿ ಮತ್ತು ಕೃಷಿ ಪರಿಕರಗಳ ಪೂರೈಕೆಗೆ ಏಜೆನ್ಸಿ ನಿಗದಿಪಡಿಸುವಾಗ ಅಳವಡಿಸಿರುವ ಮಾನದಂಡಗಳೇನು? ಇದನ್ನು ಸ್ಪಷ್ಟಪಡಿಸಬೇಕು.

ಶ್ರೀ ಎಸ್.ಎ.ರವೀಂದ್ರನಾಥ (ಕೃಷಿ ಸಚಿವರು) : ಎಲ್ಲಾ ಪರಿಕರಗಳನ್ನು ಏನು ಮಾಡಬೇಕೆನ್ನುವ ಬಗ್ಗೆ ಟೆಂಡರ್ ಕರೆದಿರುತ್ತಾರೆ. ಕೇಂದ್ರ ಸರ್ಕಾರದಲ್ಲೂ ಆ ರೀತಿ ನೀತಿ ಇದೆ. ಆ ಪ್ರಕಾರ ಟೆಂಡರ್‌ನಲ್ಲಿ ಯಾರ್ಯಾರು ಭಾಗವಹಿಸಿರುತ್ತಾರೆ ಅವರಿಗೆ ಮಾತ್ರ ಕೊಡುವಂತೆ ಮಾಡಿರುತ್ತೇವೆ. ರೈತರು ಯಾವ್ಯಾವ ಉಪಕರಣಗಳನ್ನು ಬಳಸುತ್ತಾರೆ, ಅವುಗಳ ಮೇಲೆ 50% ಸಬ್ಸಿಡಿ ನಾವು ಕೊಡುತ್ತೇವೆ. ಟ್ರಾಕ್ಟರ್ ಮೇಲೆ 60 ಸಾವಿರ, ಟ್ರಿಲ್ಲರ್ ಮೇಲೆ 50 ಸಾವಿರ ಸಬ್ಸಿಡಿ ಕೊಡುತ್ತೇವೆ. ಇಂದಿನ ವರ್ಷ 48 ಕೋಟಿ ಸಬ್ಸಿಡಿ ಇತ್ತು. ಈ ವರ್ಷ 143 ಕೋಟಿ ಸಬ್ಸಿಡಿ ಕೊಡುತ್ತಿದ್ದೇವೆ. ಹಾಗಾಗಿ ರೈತರಿಗೆ, ಯಾವುದೇ ಶಾಸಕರ, ಮಂತ್ರಿಗಳ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರ ಪತ್ರ ಬೇಕಾಗಿರುವುದಿಲ್ಲ. ಯಾರಿಗೆ ಎಷ್ಟು ಬೇಕಾದರೂ ಸಬ್ಸಿಡಿ ಕೊಡುವುದನ್ನು ಈ ವರ್ಷ ನಮ್ಮ ಸರ್ಕಾರ ಬಂದ ಮೇಲೆ ಮಾಡಿದ್ದೇವೆ.

ಶ್ರೀ ಸಿ.ಟಿ.ರವಿ : ಈ HDP pipe, sprinkler pipe ಗೆ ಸಬ್ಸಿಡಿ ಕೊಟ್ಟಿರುವುದಕ್ಕೆ ಸರ್ಕಾರಕ್ಕೆ ಮತ್ತು ಕೃಷಿ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸಲು ಬಯಸುತ್ತೇನೆ. ಯಾರು ಅರ್ಜಿ ಹಾಕಿರುತ್ತಾರೆ ಅವರೆಲ್ಲರಿಗೂ ಸಬ್ಸಿಡಿ ಕೊಡುತ್ತೇವೆಂದು ತೆಗೆದುಕೊಂಡಿರುವ ತೀರ್ಮಾನ ಸ್ವಾಗತಾರ್ಹ. ಆದರೆ, HDP pipe sprinkler pipe ಏನಿದೆ ನೀವು ಸಬ್ಸಿಡಿ ಕೊಟ್ಟ ನಂತರವೂ, ಮಾರುಕಟ್ಟೆ ದರಕ್ಕೆ ಸಮಾನವಾಗಿರುತ್ತದೆ ಅಥವಾ ಅದಕ್ಕಿಂತ ಹೆಚ್ಚಿರುತ್ತದೆ. ಯಾವ ಏಜೆನ್ಸಿಗೆ ನಿಗದಿ ಮಾಡಿದ್ದೀರಿ? ಅಲ್ಲಿ ಬೆಲೆ ನಿಗದಿಪಡಿಸಲು ಅನುಸರಿಸಿರುವ ಮಾನದಂಡವೇನು? ಆ ಬೆಲೆಪಟ್ಟಿಯನ್ನು ನೀವು ಮಾರುಕಟ್ಟೆಯಲ್ಲಿ ಪರಿಶೀಲನೆ ಮಾಡದ್ದೀರಾ?

ಶ್ರೀ ಎಸ್.ಎ.ರವೀಂದ್ರನಾಥ : ಇದು ರೈತರಿಗೇ ಬಿಟ್ಟಿರತಕ್ಕಂಥದ್ದು. ಸರ್ಕಾರದಿಂದ ಒಪ್ಪಿಗೆ ಪಡೆದುಕೊಂಡಿರುವ ಅಂಗಡಿಗಳಲ್ಲಿ ರೈತರೇ ಹೋಗಿ ಖರೀದಿ ಮಾಡಬಹುದು. ನಾವು ಸಬ್ಸಿಡಿ ಮಾತ್ರ ಕೊಡುತ್ತೇವೆ. ರೈತರು ತಂದು ಕೊಡುವ ಬಿಲ್ಲಿಗೆ ನಾವು ಕನಿಷ್ಠ, ಗರಿಷ್ಠ ಇಷ್ಟು ಪರ್ಸೆಂಟ್ ಸಬ್ಸಿಡಿ ಎಂದು ಮಾಡಿರುತ್ತೇವೆ. ಅದನ್ನು ಕೊಡುತ್ತೇವೆ. ಅದು ಬಿಟ್ಟರೆ, ರೈತರೇ ಖರೀದಿ ಮಾಡಲು ಅವಕಾಶ ಕೊಟ್ಟಿದ್ದೇವೆ.

ಶ್ರೀ ಸಿ.ಟಿ.ರವಿ : ಇಲ್ಲಿ ತೊಂದರೆಯಾಗುತ್ತಿರುವುದು, ಏಜೆನ್ಸಿ fix ಮಾಡಬೇಕಾದರೆ, state tender ಕರೆದಿರುತ್ತಾರೆ. ಆ ಏಜೆನ್ಸಿ tender fixing ನಲ್ಲೇ ಅವರು ಮಾರುಕಟ್ಟೆ ದರಕ್ಕಿಂತ ಹೆಚ್ಚು ಬೆಲೆ ನಿಗದಿ ಮಾಡಿರುತ್ತಾರೆ. ಇದನ್ನು ತಪ್ಪಿಸಲು ಏನು ಕ್ರಮ ತೆಗೆದುಕೊಂಡಿದ್ದೀರಿ? ಇಲ್ಲದೇ ಹೋದರೆ ನೀವು ಕೊಟ್ಟಿದ್ದೂ ರೈತರಿಗೆ ಲಾಭವಾಗುವುದಿಲ್ಲ. ಏಕೆಂದರೆ, ತೋಟಗಾರಿಕಾ ಇಲಾಖೆ, ಕೃಷಿ ಇಲಾಖೆ ಮೂಲಕ ಸಬ್ಸಿಡಿ ಚೆಕ್‌ನ್ನು ಏಜೆನ್ಸಿ ಕೊಡುತ್ತೀರಿ ರೈತರಿಗೆ ಕೊಡುವುದಿಲ್ಲ. ನೀವು ರೈತರಿಗೆ ಸಬ್ಸಿಡಿ ಚೆಕ್ ಅನ್ನು ಕೊಟ್ಟರೆ ಅವರು ಎಲ್ಲಿ ಬೇಕಾದರೂ ಮಾರುಕಟ್ಟೆ ದರದಲ್ಲಿ ಕೊಂಡುಕೊಳ್ಳುತ್ತಾರೆ. ಏಜೆನ್ಸಿ ನಿಗದಿ ನೀವು ಮಾಡಿದ್ದೀರಿ. ಇಂತಹ ಕಡೆಯೇ ಕೊಂಡುಕೊಳ್ಳಬೇಕೆಂದು ನೀವು ಏಜೆನ್ಸಿ ನಿಗದಿ ಮಾಡಿದಾಗ, ಆ ಏಜೆನ್ಸಿನಿಯವರು ಹೇಳಿದ್ದೇ ಬೆಲೆಯಾಗುತ್ತದೆ. ಒಂದು ರೀತಿ ಲೂಟಿ ನಡೆಯುತ್ತದೆ. ಸರ್ಕಾರ ಕೊಟ್ಟಿದರೂ ರೈತರಿಗೆ ಉಪಯೋಗವಾಗುವುದಿಲ್ಲ. ಇದನ್ನು ತಪ್ಪಿಸಲು ತೆಗೆದುಕೊಂಡಿರುವ ಕ್ರಮ ಏನು?

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಕೃಷಿ ಮಂತ್ರಿಗಳು ಉತ್ತರ ಹೇಳುವ ಮುಂಚೆ ಒಂದು ಸಲಹೆ, Horticulature Department ಅವರು ರೈತರಿಗೆ 50% ಸಬ್ಸಿಡಿಯನ್ನು ಬ್ಯಾಂಕ್‌ನಲ್ಲಿ account ಗೆ ಹಾಕುತ್ತಾರೆ. Agriculture ನವರೂ ಆ ರೀತಿ ಕ್ರಮ ತೆಗೆದುಕೊಳ್ಳವುದಕ್ಕೆ ಪ್ರಯತ್ನ ಮಾಡಿಸಬಹುದಾಗಿತ್ತು.

ಶ್ರೀ ಎಸ್.ಎ.ರವೀಂದ್ರನಾಥ : 2009–10ನೇ ಸಾಲಿನಲ್ಲಿ ಶಾಸಕರನ್ನು ಕರೆದು ಸಭೆ ಮಾಡಿ. ಅವರು ಏನು ಸಲಹೆಗಳನ್ನು ಕೊಡುತ್ತಾರೆ, ಅದರಲ್ಲಿ ಉತ್ತಮವಾದ ಸಲಹೆಗಳನ್ನು ತೆಗೆದುಕೊಂಡು ಮಾಡುತ್ತೇನೆ.

ರಾಜ್ಯದಲ್ಲಿ ದಾಳಿಂಬೆ ಬೆಳೆಗೆ ದುಂಡಾಣು ರೋಗದ ಬಗ್ಗೆ.

58(350) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)
ವಿ.ಉಮೇಶ್ ಕತ್ತಿ (ಮಾನ್ಯ ತೋಟಗಾರಿಕೆ ಮತ್ತು ಬಂದಿಖಾನೆ ಸಚಿವರು)